# ಸೌಂದರ್ಯದ ಹಾದಿಯಲ್ಲಿ ಪ್ರೀತಿ, ನಗು ಮತ್ತು ಸಂದೇಶ




## ಭುವನ ಸುಂದರಿಯ ಭಾವಲೋಕ

ಒಂದೊಮ್ಮೆ ಬಾಡಿ ಶೇಮಿಂಗ್‌ಗೆ ಒಳಗಾಗಿದ್ದ ಈ ಚೆಲುವೆ ಈಗ ಜಗತ್ತೇ ಕಣ್ಣರಳಿಸಿ ನೋಡುವಂತಹ ಪಟ್ಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಅಮ್ಮನ ಧೈರ್ಯ ತುಂಬಿದ ಮಾತುಗಳೇ ಸಾಧನೆಗೆ ಪ್ರೇರಣೆ ಎನ್ನುವ ಈ ಭುವನ ಸುಂದರಿ, 'ಎಂದೆಂದಿಗೂ ನಗುತ್ತಿರಿ. ಪ್ರೀತಿ, ಸಂತೋಷವನ್ನು ಹಂಚಿ' ಎಂಬ ಮನದ ಮಾತನ್ನು ಹಂಚಿಕೊಳ್ಳುತ್ತಾರೆ.

■ ವಿದ್ಯಾಶ್ರೀ ಎಸ್.

'ನಿಮ್ಮ ಜೀವನಕ್ಕೆ ನೀವೇ ದನಿ. ನನ್ನ ಮೇಲೆ ನಾನು ಇರಿಸಿದ್ದ ನಂಬಿಕೆಯಿಂದಲೇ ಇಂದು ಜಾಗತಿಕ ವೇದಿಕೆ ಮೇಲೆ ಇದ್ದೇನೆ...'

ಹೀಗೆ ಆತ್ಮವಿಶ್ವಾಸವನ್ನೇ ಹುರಿದುಂಬಿಸಿಕೊಂಡು ಕಣ್ಣರಳಿಸಿ ಮಾತನಾಡಿದವರು ಭುವನ ಸುಂದರಿ ಹರ್ನಾಜ್ ಕೌರ್ ಸಂಧು.

ಯುವತಿಯರು ಎದುರಿಸುತ್ತಿರುವ ಒತ್ತಡಗಳಿಂದ ಹೊರಬರಲು ಏನು ಸಲಹೆ ನೀಡುತ್ತೀರಿ ಎಂಬ ಪ್ರಶ್ನೆಗೆ, ಸ್ವ ಸಾಮರ್ಥ್ಯದ ನಂಬಿಕೆ ಇಲ್ಲದಿರುವುದರಿಂದಲೇ ಯುವಜನರು ಇಂದು ಒತ್ತಡದ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರತಿಯೊಬ್ಬರಲ್ಲಿಯೂ ಅನನ್ಯವಾದ ವ್ಯಕ್ತಿತ್ವವಿದೆ ಎಂಬುದು ಅವರಿಗೆ ಬಂದರೆ ಎಲ್ಲವೂ ಸುಂದರವಾಗಿ ಕಾಣುತ್ತದೆ. ಇತರರ ಜೊತೆಗೆ ಹೋಲಿಕೆ ಮಾಡಿಕೊಳ್ಳುವುದನ್ನು ಬಿಟ್ಟು, ಜಗತ್ತಿನಲ್ಲಿ ನಡೆಯುತ್ತಿರುವ ಮಹತ್ವದ ವಿಷಯಗಳ ಬಗ್ಗೆ ಹೆಚ್ಚು ಮಾತನಾಡಬೇಕು ಎಂದು ನಗೆಯ ಬೀರುತ್ತಲೇ ಜಾಣ್ಮೆಯ ಉತ್ತರ ನೀಡಿದ್ದರು.

ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿರುವ ಹರ್ನಾಜ್‌ಗೆ ಈಗ ಇಪ್ಪತ್ತೊಂದರ ಪ್ರಾಯ. 21 ವರ್ಷಗಳ ನಂತರ ಭಾರತಕ್ಕೆ ಭುವನ ಸುಂದರಿ ಕಿರೀಟವನ್ನು ತಂದುಕೊಟ್ಟಿರುವ ಈ ಬೆಡಗಿ ವೇದಿಕೆ ಮೇಲೆ ತನ್ನ ದಿಟ್ಟ ಉತ್ತರಗಳಿಂದ ಬೆರಗು ಮೂಡಿಸಿದಾಕೆ.

ಗುರುದಾಸ್‌ಪುರ ಸಮೀಪದ ಕೊಹಲಿ ಎಂಬ